ಮಾಡುತ್ತಾ ಆಡಿಕೊಂಡು ನಕ್ಕರಂತೆ, ಇದ್ಯಾವ ತರಹ ಹಂಡಬಂಡ ಬಣ್ಣ ಮಾರಾಯಾ ಅಂತ ಗೆಳೆಯರ ಬಳಿ ಬೆನ್ನಿಗೆ ಗುಮ್ಮಿಸಿಕೊಂಡು ಹೊಸ ಅವತಾರದಲ್ಲೇ ಬಂದರು. ರಸ್ತೆಯಲ್ಲಿ ಜನರೂ ಮಕ್ಕಳು-ಮರಿಗಳೂ ವಿಚಿತ್ರ ಬಣ್ಣದ ಅಂಗಿತೊಟ್ಟ ಇಬ್ಬರನ್ನೂ ಜೋಕರ್‌ಗಳಂತೆ ತಿರುತಿರುಗಿ ನೋಡಿ ಕೈಬೆರಳು ತೋರಿಸಿ ಕುಣಿದು ಕುಪ್ಪಳಿಸಿದರಂತೆ. ಅಂದಿನಿಂದ ಟೇಲರ್ ಬಾನಣ್ಣನೆಂದರೆ ಇವರು ಭಯಬೀಳ್ತಾರೆ. ಇನ್ನುಮೇಲೆ ಇಬ್ಬರೂ ಜಗಳವಾಡಿದರೆ ನಿಮಗೆ ಇದೇ ಗತಿ ಅಂತ ನಿನ್ನ ತಾತನೂ ಸರೀ ಬೈದರು ಅಂತ ತಮಾಷೆಯಲ್ಲೇ ನೆನಪಿಸಿಕೊಂಡು ಹೇಳುತ್ತಾ ನಕ್ಕಳು ಅಜ್ಜಿ.

'ಹಾಗಾಗಿ ಸೂರ್ಯಮಾಮನಿದ್ದಾಗ ನಾನು ಕರೆದರೆ ವರುಣಮಾಮ ಬರುತ್ತಾನೋ ಇಲ್ಲವೋ, ನೀನು ಪ್ರಯತ್ನಿಸು' ಅಂತ ಅಜ್ಜಿ ತನ್ನ ಮೊಬೈಲನ್ನು ಧರ್ಮನಿಗೆ ಕೊಟ್ಟಳು.

'ಏನಂತ ಫೀಡ್ ಮಾಡಿಕೊಂಡಿದ್ದೀ ಅಜ್ಜೀ?' ಅಂತ ಕೇಳುತ್ತ ವರುಣಮಾಮನ ಹೆಸರು ಹುಡುಕಿದ. ಧರ್ಮ ಮೂರ್‍ನಾಲ್ಕು ಸಲ ಕಾಲ್ ಮಾಡಲು ಪ್ರಯತ್ನಿಸಿ ಸೋತ. ಪ್ರತೀ ಬಾರಿಯೂ 'ವ್ಯಾಪ್ತಿ ಪ್ರದೇಶದಿಂದ ಹೊರಗಿದ್ದಾರೆ, ದಯವಿಟ್ಟು ಸ್ವಲ್ಪ ಹೊತ್ತಿನ ನಂತರ ಪ್ರಯತ್ನಿಸಿ' ಅನ್ನುವ ಮಧುರವಾದ ಧ್ವನಿಯೇ ಕೇಳಿಬಂತು. 'ಮಾಮಂಗೆ ಫೋನ್ ಹೋಗುತ್ತಿಲ್ಲ ಅಜ್ಜೀ' ಅಂತ ಧರ್ಮನೂ ಬೇಸರ ಮಾಡಿಕೊಂಡ.

'ಎಲ್ಲಿ ಡ್ಯೂಟಿ ಮೇಲಿದ್ದಾನೋ ಏನೋ ಪಾಪ, ಒಮ್ಮೆ ಆಗುಂಬೆ ಅಂತಾನೆ, ಇನ್ನೊಮ್ಮೆ ದೂರದ ಚಿರಾಪುಂಜಿ ಅಂತಾನೆ, ಇಲ್ಲೇ ಆಗುಂಬೆಯಲ್ಲಿದ್ದರೆ ತುಸುಹೊತ್ತು ಬಂದು ಹೋಗ್ತಾನೋ ಏನೋ, ಇರು, ಮಿಸ್ಡ್ ಕಾಲ್ ನೋಡಿ ತಾನೇ ಮಾಡಿದರೂ ಮಾಡಬಹುದು ಕಾಯೋಣ' ಅಂತ ಧರ್ಮನನ್ನು ಸಮಾಧಾನ ಪಡಿಸಿದಳು ಅಜ್ಜಿ. ಅಷ್ಟರಲ್ಲೇ ಫೋನ್ ರಿಂಗಾಯಿತು. ಇತ್ತ ಉತ್ಸಾಹದಿಂದಲೇ ಧರ್ಮ ರಿಸೀವ್ ಮಾಡಿದ. 'ಏನಮ್ಮಾ ಕಾಲ್ ಮಾಡಿದ್ದೀಯಾ, ಚೆನ್ನಾಗಿದ್ಯಾ?' ಅನ್ನುವ ವರೂಮಾಮನ ಧ್ವನಿ ಧರ್ಮನಿಗೆ ತುಂಬಾ ಪ್ರಿಯವೆನಿಸಿತು.

'ಹಲೋ ವರುಮಾಮಾ, ನಾನು ಧರ್ಮ' ಅಂತ ಕೇಕೆ ಹಾಕಿ ನಕ್ಕ. ಅತ್ತ ವರೂಮಾಮನಿಗೂ ಬಹಳ ಖುಷಿ, 'ಅರೆರೆರೆ ಏ ಕಳ್ಳಾ, ಯಾವಾಗ ಬಂದ್ಯೋ ರಾಜಾ, ಹೆಂಗದೀಯೋ ನನ್ನ ಪುಟ್ಟಣ್ಣ' ಅಂತ ಫೋನಿನಲ್ಲೇ ಮುದ್ದುಗರೆದ.

'ಮಾಮ ನೀ ಯಾವಾಗ ಬರ್ತಿ ಇಲ್ಲಿ? ಅಜ್ಜಿಗೆ ಗಿಡಕ್ಕೆ ನೀರು ಹಾಕಲು ಆಗುತ್ತಿಲ್ಲ, ಅವಳಿಗೆ ಸ್ವಲ್ಪ ಹುಷಾರಿಲ್ಲ, ಬಾ ಮಾಮ' ಮುದ್ದಾದ ಭಾಷೆಯಲ್ಲಿ ಅಂದ. ಅತ್ತ ವರುಮಾಮನ ಕರುಳು ಚುರ್ ಅಂದಿರಬೇಕು.

'ಯಸ್ ಧರ್ಮ ಬಾಸ್, ನೀನೇ ನನಗೆ ಡೀ ಬಾಸ್, ನೀ ಹೇಳಿದ ಮೇಲೆ ಬರೋದೇ, ಇಲ್ಲೇ ಆಗುಂಬೆಯಲ್ಲಿದ್ದೆ, ಅತ್ತ ಚಿರಾಪುಂಜಿಗೆ ಹೋಗುವ ಮಧ್ಯೆ ಸ್ವಲ್ಪ ಹೊತ್ತು ಬಂದು ಹೋಗ್ತೇನೆ, ನಿನ್ನ ನೋಡಿದ ಹಾಗೂ ಆಯ್ತು' ಅಂತ ಹೇಳಿ ಅಲ್ಲಿಂದ ಥಟ್ಟನೆ ತನ್ನ ವಿಮಾನವನ್ನು ಏರಿಯೇ ಬಿಟ್ಟ.

ಸ್ವಲ್ಪ ಹೊತ್ತಿಗೆಲ್ಲ ಅತ್ತ ಬಿಸಿಲು, ಇತ್ತ ಮಳೆ ಶುರುವಾಗೇ ಹೋಯ್ತು. ಮಳೆ ಬಿಸಿಲು! ಬಿಸಿಲು ಮಳೆ! ಬಾನಣ್ಣನ ಅಂಗಳದಲ್ಲಿ ಇಬ್ಬರ ಪೈಪೋಟಿ ಆರಂಭವಾಗೇ ಬಿಟ್ಟಿತು. ಸೂರಿಮಾಮನ ಕಣ್ಣು ಇದ್ದಲ್ಲೇ ಕೆಂಪಾಗತೊಡಗಿತು. ಧರ್ಮ ಹಿರಿಹಿರಿ ಹಿಗ್ಗುತ್ತ ಅನಾನಸ್ ಗಿಡವನ್ನು ಓರೆಗಣ್ಣಲ್ಲೇ ಗಮನಿಸುತ್ತಾ, ವರುಮಾಮನ ಕೈಹಿಡಿದು ಕುಣಿದಾಡಿದ. ತೋಟದ ಗಿಡಗಳೆಲ್ಲ ಸಂತೋಷದಿಂದ ತೊನೆದಾಡಿದವು. ಅಜ್ಜಿಗೆ ನಮಸ್ಕರಿಸಿದ ವರುಮಾಮ ಜೂನ್‌ನಲ್ಲಿ ಮತ್ತೆ ಬರುವೆ ಅನ್ನುತ್ತ ಧರ್ಮನನ್ನು ಎತ್ತಿ ಮುದ್ದಾಡಿ, ಅವಸರದಲ್ಲೇ ಹೊರಟ.

ಇಬ್ಬರೂ ಒಮ್ಮೆಲೇ ಧಾವಿಸುವುದನ್ನು ಕಂಡ ಬಾನಣ್ಣ ಮುಂದಾಲೋಚನೆಯಿಂದ ಆಗಲೇ ಬಣ್ಣ ಬಣ್ಣದ ಉದ್ದ ಬಟ್ಟೆಯನ್ನು ಮೇಲ್ಗಡೆಯಿಂದ ಬೆಟ್ಟದಂಚಿಗೆ ಅರ್ಧ ಚಂದ್ರಾಕಾರದಲ್ಲಿ ಬಿಡಿಸಿ ಇಳಿಬಿಟ್ಟಿದ್ದ. ಧರ್ಮನನ್ನು ಕರೆದ ಅಜ್ಜಿ 'ನೋಡಲ್ಲಿ ಧರ್ಮಾ, ಬಾನಣ್ಣ ಹೊಲಿದ ಅಂಗಿಯ ಬಣ್ಣ ಬಣ್ಣದ ಉದ್ದ ಬಟ್ಟೆ' ಅಂತ ತೋರು ಬೆರಳಿಟ್ಟು ಕಾಣಿಸಿದಳು.

ಧರ್ಮ ಅಚ್ಚರಿಯಿಂದಲೂ ಸಂಭ್ರಮದಿಂದಲೂ ಕುಣಿಯುತ್ತಾ ತಾನು ಎರಡನೇ ತರಗತಿಯಲ್ಲಿ ಕಲಿತ ಕುವೆಂಪು ತಾತನ ಪದ್ಯವನ್ನು ಹಾಡುತ್ತಾ ಅಜ್ಜಿಯ ಮಡಿಲಲ್ಲಿ ಮೈಮರೆತ.

**ಕಾಮನಬಿಲ್ಲು ಕಮಾನು ಕಟ್ಟಿದೆ**
**ಮೋಡದ ನಾಡಿನ ಬಾಗಿಲಿಗೆ...**

●